ತುರುವೇಕೆರೆ ಟೌನಿನಲ್ಲಿ ವಾಸದ ಮನೆಗಳ ನಿರ್ಮಾಣ

(21) ಶ್ರೀ ಬೈರಪ್ಪಾಜಿ (ತುರುವೇಕೆರೆ).— ಮಾನ್ಯ ಕಾನೂನು ಸಂಸದೀಯ ಹಾಗೂ ವಸತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ರಾಜ್ಯದ ಗೃಹ ನಿರ್ಮಾಣ ಮಂಡಳಿಯಿಂದ ಏಳು ವಾಸದ ಮನೆಗಳನ್ನು ತುರುವೇಕೆರೆ ಟೌನಿನಲ್ಲಿ ಕಟ್ಟುತ್ತಿರುವುದು ನಿಜವೇ ?

ಆ) ಈ ಮನೆಗಳಿಗಾಗಿ ತುರುವೇಕೆರೆ ಪೌರಸಭೆಯವರು ಉಚಿತವಾಗಿ ನಿವೇಶನಗಳನ್ನು ಕೊಟ್ಟು ಪೌರಸಭೆಯ ನೌಕರಿಗಾಗಿ ವಾಸದ ಮನೆಗಳನ್ನು ಕಟ್ಟಿಕೊಡಲು ಕೇಳಿದ್ದು ನಿಜವಲ್ಲವೇ ?

ಇ) ಹಾಗಿದ್ದಲ್ಲಿ ಸಾರ್ವಜನಿಕರಿಗೆ ಮಾರಲು ಇತ್ತೀಚೆಗೆ ಟೆಂಡರ್ ಕರೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;?

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು, ಸಂಸದೀಯ ಹಾಗೂ ವಸತಿ ಮಂತ್ರಿಗಳು).—

ಅ) ಹೌದು.

ಆ) ನಿಜ.

ಇ) ಆದರೆ ಈ ಬಗ್ಗೆ ಯಾವ ತೀರ್ಮಾನವನ್ನು ತೆಗೆದುಕೊಂಡಿಲ್ಲ.

ಶ್ರೀ ಬಿ. ಬೈರಪ್ಪಾಜಿ.— ಸ್ವಾಮಿ, ಇದರಲ್ಲಿರುವ (ಅ) ಪ್ರಶ್ನೆಗೆ ಉತ್ತರವಾಗಿ ಹೌದು ಎಂದು ಹೇಳಿದ್ದೀರಿ ಹಾಗೆಯೇ (ಆ) ಪ್ರಶ್ನೆಗೆ ಉತ್ತರವಾಗಿ ನಿಜ ಎಂದು ಹೇಳಿದ್ದೀರಿ. ನಾನು ಕೇಳುವುದೇನೆಂದರೆ ಲಕ್ಷಾಂತರ ರೂಪಾಯಿಗಳ ಬೆಲೆಬಾಳುವ ಸೈಟನ್ನು ಕೊಡುವುದಿಲ್ಲ ಎಂದು ಹೇಳಿ ಈಗ ಅದನ್ನು ಬೇರೆಯವರಿಗೆ ಮಾರುವುದಕ್ಕೆ ಟೆಂಡರ್ ಕರೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ ಅದಕ್ಕೂ ಸಹ ಹೌದು ಎಂದು ಹೇಳಿದ್ದೀರಿ. ಆದರೂ ಇದರ ಬಗ್ಗೆ ಯಾವ ತೀರ್ಮಾನವನ್ನೂ ಸಹ ತಾವು ತೆಗೆದುಕೊಂಡಿಲ್ಲವೆಂದು ಹೇಳಿದ್ದೀರಿ. ಇದರ ಔಚಿತ್ಯವಾದರೂ ಏನು ಎನ್ನುವುದನ್ನು ಹೇಳುತ್ತೀರಾ?

ಶ್ರೀ ಎ. ಲಕ್ಷ್ಮೀಸಾಗರ್.— ೧೯೨೫ರಲ್ಲಿ ತುರುವೇಕೆರೆ ನಗರಸಭೆಯವರು ಆ ಜಾಗವನ್ನು ಅವರಿಗೆ ಕೊಟ್ಟಿದ್ದು ನಿಜ. ಮತ್ತು ಅವರಿಗೆ ವಾಸದ ಮನೆಗಳನ್ನು ಕಟ್ಟಿಕೊಡಲು ಹೇಳಿದ್ದುದೂ ನಿಜ. ಆದರೆ ತದನಂತರ ತುಮಕೂರು ಜಿಲ್ಲೆಯ ಹೆಲ್ತ್ ಅಂಡ್ ಫ್ಯಾಮಿಲಿ ವೆಲ್‌ಫೇರ್‌ನವರು ಏನು ಮಾಡಿದ್ದಾರೆ ಎಂದರೆ ೧೯೮೩ನೇ ಇಸವಿಯಲ್ಲಿ ಆ ಜಮೀನನ್ನು ನಮಗೇ ಅಂದರೆ ಮುನಿಸಿಪಾಲಿಟಿಗೇ ಕೊಡುವಂತೆ ಒಂದು ಪತ್ರ ಬರೆದಿದ್ದಾರೆ.

ಎರಡನೆಯದಾಗಿ, ೧೯೮೨-೮೩ರಲ್ಲಿ ಅವರಿಗೆ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ಒಂದು ವ್ಯವಸ್ಥೆಯನ್ನು ಮುನಿಸಿಪಾಲಿಟಿಯವರು ಮಾಡಿಕೊಡಬೇಕಾಗಿತ್ತು. ಆಗ ಅವರು ಅದರ ಬಗ್ಗೆ ಆಸ್ತೆ ವಹಿಸಲಿಲ್ಲಾ. ಈಗ ಈ ಪ್ರಶ್ನೆ ಎದ್ದಿದೆ. ಆದರೂ ಕೂಡ ಈ ಬಗ್ಗೆ ಮುನಿಸಿಪಾಲಿಟಿಯವರನ್ನು ಕೇಳದೇ ಅದನ್ನು ವಿಲೇವಾರಿ ಮಾಡುವುದಿಲ್ಲ ಎಂದು ಹೇಳುತ್ತೇನೆ.

ಪ್ರಶ್ನೆ ೩೦೪ (೫೭) ಶ್ರೀ ಕೆ.ಎಸ್. ಕಾಳಮರಿಗೌಡ.— ಹಾಜರಿರಲಿಲ್ಲಾ.

ಶಿರಾ ನಗರದಲ್ಲಿರುವ ಕೋಟೆಯ ಅಭಿವೃದ್ಧಿ

(೭೨) ಶ್ರೀ ಪಿ. ಮೂಡ್ಲೇಗೌಡ (ಶಿರಾ).—ಮಾನ್ಯ ವಾರ್ತಾ ಪ್ರಚಾರ ಹಾಗೂ ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಸರಕಾರದವರು ಐತಿಹಾಸಿಕ ಪ್ರಸಿದ್ಧವಾದ ಶಿರಾ ನಗರದ ಕೋಟೆಯ ಅಭಿವೃದ್ಧಿ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ ?

ಆ) ಶಿರಾ ನಗರ ಪ್ರೇಕ್ಷಣೀಯ ಸ್ಥಳವೆಂದು ಪರಿಗಣಿಸುವ ಬಗ್ಗೆ ಸರ್ಕಾರದವರ ನಿಲುವೇನು ?

ಇ) ಪ್ರವಾಸೋದ್ಯಮ ನಿಗಮದ ವಾಹನಗಳನ್ನು ಶಿರಾದಲ್ಲಿ ನಿಂತು ಹೋಗುವ ವ್ಯವಸ್ಥೆ ಮಾಡಲಾಗುವುದೆ?